**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್ಃ 1022/2021</u>**

ಸಿಡಬ್ಲ್ಯೂಃ 4

ಪಿಡಬ್ಲ್ಯೂಃ 4

| | | |
|---|---|---|
| ಸಾಕ್ಷಿಯ ಹೆಸರು | : | ಜಯಪ್ಪ ನಾಯಕ |
| ತಂದೆಯ ಹೆಸರು | : | ಲಕ್ಷಣ ನಾಯಕ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಪಿ ಐ, ಚಿತ್ರದುರ್ಗ, |
| ವಾಸಸ್ಥಳ | : | ಚಿತ್ರದುರ್ಗ |

ಇಂದು ದಿನಾಂಕಃ 11.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ನಾನು 2019 ರಿಂದ ಮಾರ್ಚ 2021 ರವರೆಗೆ ಹಂಸಭಾವಿ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕ 21-11-2019 ರಂದು ನಾನು ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಬೆಳಿಗ್ಗೆ 10.15 ಗಂಟೆಯ ಸಮಯಕ್ಕೆ ಚಾಸಾ-1 ರವರು ಕರೆ ಮಾಡಿ, ಚಿಕ್ಕೇರೂರು ಗ್ರಾಮದಿಂದ ಹಿರೇಕೆರೂರು ಗ್ರಾಮಕ್ಕೆ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ವಿತರಿಸಬೇಕಾಗಿದ್ದಂತಹ ಪಡಿತರ ಅಕ್ಕಿಯನ್ನು ಅನಧಿಕೃತವಾಗಿ ಚೀಲದಲ್ಲಿ ಸಂಗ್ರಹಿಸಿಕೊಂಡು ಹೆಚ್ಚಿನ ಬೆಲೆಗೆ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಸಲುವಾಗಿ ಬರುತ್ತಿದ್ದಾರೆ ಎಂದು ನಮಗೆ ಮಾಹಿತಿ ಬಂದಿದ್ದು, ನಂತರ ನಾನು ಚಿಕ್ಕೇರೂರ ಹೊರ ಠಾಣೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಚಾಸಾ-1, ಪಂಚರಾದಂತಹ ಚಾಸಾ-2 ಮತ್ತು 3 ರವರು ಹಾಗೂ ನಮ್ಮ ಠಾಣೆಯ ಸಿಬ್ಬಂದಿಯಾದ ಚಾಸಾ-5 ಮತ್ತು 6 ರವರು ಅಲ್ಲಿ ಇದ್ದರು. ನಂತರ ಪಂಚರನ್ನು ಕರೆದುಕೊಂಡು ಪೋಲಿಸ್ ಜೀಪ್ ನಲ್ಲಿ ನಾನು ಚಾಸಾ-1, 2, 3, 5 ಮತ್ತು 6 ರವರನ್ನು ಕೂಡಿ ಚಿಕ್ಕೇರೂರು-ಹಿರೇಕೆರೂರು ರಸ್ತೆಯ ಪಕ್ಕದಲ್ಲಿರುವಂತಹ ಅವಲಕ್ಕಿ ಗೋಡಾನ್ ಬಳಿ ಹೋಗಿದ್ದು, ಸ್ವಲ್ಪ ದೂರದಲ್ಲಿ ಜೀಪನ್ನು ನಿಲ್ಲಿಸಿ ಗಮನಿಸಿದ್ದು, ಆಗ ಸಮಯ 11.45 ಗಂಟೆಯ ಸಮಯಕ್ಕೆ ಅಶೋಕ ಲೈಲ್ಯಾಂಡ್ ಒಂದು ಗೂಡ್ಸ ವಾಹನ ಬಂದಿದ್ದು ಅದರ ನೊಂದಣಿ ಸಂಖ್ಯೆ ಕೆಎ-15 ಎ-4882 ಆಗಿದ್ದು, ಸದರಿ ವಾಹನಕ್ಕೆ ಕೈಯಿಂದ ಸೂಚನೆಯನ್ನು ನೀಡಿ ಅದನ್ನು ನಿಲ್ಲಿಸಿದೆವು. ಅದರ ಚಾಲಕನು ನಮ್ಮನ್ನು ನೋಡಿ ಓಡಲು

ಪ್ರಯತ್ನಿಸಿದ್ದು ಆಗ ಚಾಸಾ-1 ರವರು ಆತನನ್ನು ಬೆನ್ನತ್ತಿ ಹಿಡಿದಿರುತ್ತಾರೆ. ನಂತರ ಸದರಿ ವ್ಯಕ್ತಿಯನ್ನು ವಿಚಾರಿಸಲಾಗಿ ಆತನ ಹೆಸರು ನಿವೃತ್ತಿ ಗಣಪತೆಪ್ಪ ಮಾಳದಕರ ಎಂದು ತಿಳಿಸಿ ನಂತರ ತಾನು ಪಡಿತರಿಗೆ ನೀಡಬೇಕಾಗಿದ್ದ ಅಕ್ಕಿಯನ್ನು ತನ್ನ ವಾಹನದಲ್ಲಿ ಸಂಗ್ರಹಿಸಿಟ್ಟುಕೊಂಡಿರುವುದಾಗಿ ಒಪ್ಪಿಕೊಂಡಿರುತ್ತಾರೆ. ನಂತರ ಸದರಿ ವಾಹನವನ್ನು ಪರೀಶೀಲಿಸಲಾಗಿ ಅದರಲ್ಲಿ 40 ಕೆಜಿ ಯ 13 ಬ್ಯಾಗ್ ಗಳು ಅದರ ಮೌಲ್ಯ 18,200/- ಆಗುವಷ್ಟು ಅಕ್ಕಿಯನ್ನು ಸಂಗ್ರಹಿಸಿರುವುದು ಕಂಡು ಬಂದಿರುತ್ತದೆ. ನಂತರ ನಾವು ಸದರಿ ಬ್ಯಾಗ್ ಗಳಿಗೆ ಕ್ರಮ 1 ರಿಂದ 13 ಎಂದು ಗುರುತಿಸಿರುತೆತೇವೆ. ನಂತರ ಪ್ರತೀ ಬ್ಯಾಗ್ ನಿಂದಲೂ 2 ಕೆ.ಜಿ ಯಷ್ಟು ಅಕ್ಕಿಯನ್ನು ಸ್ಯಾಂಪಲ್ ಗಾಗಿ ಪ್ರತ್ಯೇಕಿಸಿ ಸ್ಥಳದಲ್ಲಿ 11.45 ರಿಂದ 12.45 ರವರೆಗೆ ಪಂಚನಾಮೆಯನ್ನು ಮಾಡಿ ಅಲ್ಲಿದ್ದಂತಹ ಸಾಕ್ಷಿದಾರರ ಸಹಿಗಳನ್ನು ಸದರಿ ಪಂಚನಾಮೆಗೆ ಪಡೆದುಕೊಂಡಿರುತ್ತೇವೆ. ನಂತರ ಸದರಿ ವಾಹನ ಹಾಗೂ ಅಕ್ಕಿಯನ್ನು ಮುಂದಿನ ಕ್ರಮಕ್ಕಾಗಿ ಚಾಸಾ-1 ರವರು ತೆಗೆದುಕೊಂಡು ಹೋಗಿರುತ್ತಾರೆ. ನಂತರ ಈ ಬಗ್ಗೆ ನಾನು ಚಾಸಾ-7 ರವರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಮುದ್ದೆ ಮಾಲು-1 ನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎಂ ಬಿ ಪಿ ವಕೀಲರಿಂದಃ

ಘಟನೆ ನಡೆಯುವ ಸಮಯದಲ್ಲಿ ವಿದಾನಸಬಾ ಉಪ ಚುನಾವಣೆ ಘೋಷಣೆ ಆಗಿತ್ತು ಎಂದರೆ ಆ ಬಗ್ಗೆ ನನಗೆ ನೆನಪಿರುವುದಿಲ್ಲ. ಚಾಸಾ-1 ರಿಂದ 3 ರವರು ಒಂದೇ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ವ್ಯಕ್ತಿಗಳು ಎಂದರೆ ಆ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಮ್ಮ ಚಿಕ್ಕೇರೂರ ಪೊಲಿಸ್ ಠಾಣೆಯನ್ನು ದಾಟಿ ಮುಂದೆ ಹೋದರೆ ಅವಲಕ್ಕಿ ಗೋಡೌನ್ ಸಿಗುತ್ತದೆ ಎಂದರೆ ಸರಿ. ಚಿಕ್ಕೇರೂರ ಪೋಲಿಸ್ ಠಾಣೆಯಿಂದ ಅವಲಕ್ಕಿ ಗೋಡೌನ ಕಾಣುತ್ತದೆ ಎಂದರೆ ಸರಿ. 1 ನೇ ಆರೋಪಿಗೆ ಚಿಕ್ಕೆರೂೀರ ಗ್ರಾಮದಲ್ಲಿ ಜನರಲ್ ಸ್ಟೋರ್ ಇದೆ ಎಂದರೆ ಇರಬಹುದು. ಆತನ ಹೆಸರಿಗೆ ಜಮೀನುಗಳು ಇವೆ ಎಂದರೆ ಇರಬಹದು. ತನ್ನ ಜಮೀನಿನಲ್ಲಿ ಬೆಳೆದ ಭತ್ತವನ್ನು ಹಿರೇಕೆರೂರಗೆ ತಂದು ಮಿಲ್ಲಿಗೆ ಹಾಕಿ ಅಕ್ಕಿಯನ್ನು ಮಾಡಿಸಿಕೊಂಡು ಹೋಗುತ್ತಿದರು ಎಂದರೆ ಸರಿಯಲ್ಲ. ಆರೋಪಿ ಆ ದಿನದಂದು ಯಾವ ದಿಕ್ಕಿಗೆ ಓಡಿ ಹೋದ ಎಂದು ನನಗೆ ಹೇಳಲು ಆಗುವುದಿಲ್ಲ.

2. ವಶಪಡಿಸಿಕೊಂಡಂತಹ ಚೀಲಗಳ ಮೇಲೆ ಸರ್ಕಾರಕ್ಕೆ ಸಂಬಂದಪಟ್ಟ ಸಿಕ್ಕಾ ಶೀಲು ಇರುವ ಬಗ್ಗೆ ನಾನು ಗಮನಿಸಿರುವುದಿಲ್ಲ. ಪಂಚನಾಮೆಗೆ ನಾನು ಸಹಿ ಮಾಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೆ ನಾವು ಕೃತ್ಯ ಸ್ಥಳದಲ್ಲಿ ಸ್ವಲ್ಪ ದೂರದಲ್ಲಿ ನಿಂತು ಗಮನಿಸುತ್ತಿದ್ದಾಗ ಆರೋಪಿ ವಾಹನ ಬಂದಿದ್ದು ಅದನ್ನು ಪರೀಶಿಲಿಸಿದಾಗ ಅದರಲ್ಲಿ 13 ಚೀಲಗಳ ಪಡಿತರ ಅಕ್ಕಿ ಕಂಡು ಬಂದಿದೆ ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಸಂಖೆಗಳನ್ನು ತೋರಿಸುವ ಸಲುವಾಗಿ ನಾವು ಸುಳ್ಳು ಪ್ರಕಣವನ್ನು ಸೃಷ್ಟಿ

ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಪ್ರಧಾನ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.